ಸಂಪಾದಕೀಯ

ಫ್ಲೆಕ್ಸ್ ನಿಷೇಧ ಕಟ್ಟುನಿಟ್ಟಾಗಿರಲಿ

ನಮ್ಮ ನಾಡಿನ ಮಾನವ ನಿರ್ಮಿತ ಕುರೂಪಗಳಲ್ಲಿ ಫ್ಲೆಕ್ಸ್ ಹಾವಳಿಯೂ ಒಂದು. ಪ್ರಮುಖ ವೃತ್ತಗಳಲ್ಲಿ, ಶಾಲಾ ಕಾಲೇಜಿನ ಸರಹದ್ದಿನಲ್ಲಿ, ಬಸ್ ನಿಲ್ದಾಣಗಳಲ್ಲಿ, ಪೂಜಾ ಸ್ಥಳಗಳಲ್ಲಿ – ಹೀಗೆ ಎಲ್ಲೆಂದರಲ್ಲಿ ಫ್ಲೆಕ್ಸ್‌ಗಳು ತಲೆ ಎತ್ತುತ್ತಿರುವ ವಿದ್ಯಮಾನವನ್ನು ಗುರುತಿಸಿ, ಅದರ ವಿರುದ್ಧ ಕಾನೂನನ್ನೇ ರೂಪಿಸಲಾಗಿದೆ. ನಗರ ಮತ್ತು ಪಟ್ಟಣಗಳ ಸೌಂದರ್ಯವನ್ನು ಹಾಳುಗೆಡಹುವ ಮತ್ತು ಪರಿಸರಕ್ಕೆ ಹಾನಿ ತರುವ ಕೃತಕ ರಾಸಾಯನಿಕಗಳನ್ನು ಬಳಸಿ ರಚಿಸುವ ಫ್ಲೆಕ್ಸ್‌ಗಳ ಪ್ರದರ್ಶನವನ್ನು ನಿಷೇಧಿಸುವ ನಿಯಮಾವಳಿಗಳು ಇವೆ.

ಆದರೂ, ಅನಧಿಕೃತವಾಗಿ ಮತ್ತು ಕಾನೂನುಬಾಹಿರವಾಗಿ, ಈಗಲೂ ಅಲ್ಲಲ್ಲಿ ಫ್ಲೆಕ್ಸ್‌ಗಳು ಪ್ರತ್ಯಕ್ಷವಾಗುತ್ತಿರುವುದನ್ನು ಕಂಡರೆ, ನಮ್ಮ ನಾಗರಿಕತೆ ಸರಿದಾರಿಯಲ್ಲಿ ಸಾಗುತ್ತಿಲ್ಲವೇ ಎಂಬ ಅನುಮಾನ ಮೂಡದೇ ಇರದು.

ನ್ಯಾಯಾಲಯಗಳೇ ಕಟ್ಟುನಿಟ್ಟಿನ ಆದೇಶ ನೀಡಿ, ಅಧಿಕಾರಶಾಹಿಗೆ ಚಾಟಿ ಬೀಸಿ, ನಗರದಲ್ಲಿನ ಎಲ್ಲಾ ಫ್ಲೆಕ್ಸ್‌ಗಳನ್ನು ತೆಗೆಸಿಹಾಕಿಸಿದಂತಹ ಉತ್ತಮ ಕೆಲಸದ ನೆನಪು ಮಾಸುವ ಮುನ್ನವೇ, ಪ್ರಚಾರದ ಗೀಳು ಅಂಟಿಸಿಕೊಂಡವರು ಫ್ಲೆಕ್ಸ್ ಪ್ರದರ್ಶವನ್ನು ಅಲ್ಲಲ್ಲಿ ಮುಂದುವರಿಸಿದ್ದಾರೆ, ಕಾನೂನು ವಿಧಿಸಿದ ನಿಯಮಗಳನ್ನು ಮೀರುವ ಧಾರ್ಷ್ಟ್ಯ ತೋರುತ್ತಿದ್ದಾರೆ.

'ಫ್ಲೆಕ್ಸ್ ಸಂಸ್ಕೃತಿ'ಯೇ ವಿಕೃತ. ಅದ್ಯಾವುದೋ ಜಯಂತಿಯ ನೆಪದಲ್ಲಿ, ಜನ್ಮದಿನಾಚರಣೆಯ ನೆಪದಲ್ಲಿ, ಉದ್ಘಾಟನೆಯ ನೆಪದಲ್ಲಿ, ಶಂಕು ಸ್ಥಾಪನೆಯ ನೆಪದಲ್ಲಿ, ಪ್ರಮುಖ ನಾಯಕರ ಚಿತ್ರಗಳ ಸುತ್ತಲೂ ಹತ್ತಾರು ಸ್ಥಳೀಯ ಪುಡಾರಿಗಳ ಮತ್ತು ಕಾರ್ಯಕರ್ತರ ಬಿಂಬಗಳನ್ನು ಮುದ್ರಿಸುವ ಪರಿಪಾಠವೇ ಅಸಮಂಜಸ.

ರಾಷ್ಟ್ರ ಮತ್ತು ರಾಜ್ಯಮಟ್ಟದ ಗಣ್ಯರ ಚಿತ್ರಗಳನ್ನು ಮೊದಲ ಸಾಲಿನಲ್ಲಿ ಮುದ್ರಿಸಿ, ಉಳಿದ ಜಾಗದಲ್ಲಿ ಹತ್ತೈವತ್ತು ಜನರ ಚಿತ್ರಗಳನ್ನು ಮೂಡಿಸಿ, ಅದನ್ನು ಎಲ್ಲರೂ ನೋಡುವಂತೆ ಪ್ರದರ್ಶಿಸುವ ಸಂಸ್ಕೃತಿಯೇ ಅಸಹ್ಯ ಹುಟ್ಟಿಸುವಂತಹದ್ದು. ಬಡಾವಣೆಗಳ ಮತ್ತು ಗಲ್ಲಿಗಳ ಮರಿ ಪುಢಾರಿಗಳ ಚಿತ್ರಗಳನ್ನು ಸಾರ್ವಜನಿಕರು ನೋಡಬೇಕೆಂದು ಬಯಸುವ ಮನಸ್ಥಿತಿಯೇ ಅಗ್ಗದ ಅಭಿರುಚಿಯದ್ದು. ಜತೆಗೆ, ಫ್ಲೆಕ್ಸ್‌ಗಳ ಪ್ರದರ್ಶನಕ್ಕೆ ಕಾನೂನಿನ ತಡೆ ಇದ್ದರೂ, ಅವುಗಳನ್ನು ಪ್ರದರ್ಶಿಸುವ ಪರಿ ಇನ್ನಷ್ಟು ಕೀಳು ಎನಿಸುತ್ತದೆ.

ಫ್ಲೆಕ್ಸ್ ತಯಾರಿಸುವಾಗ ಉಪಯೋಗಿಸುವ ರಾಸಾಯನಿಕ ಮತ್ತು ಬಣ್ಣಗಳಿಂದ ಸಂಭವಿಸುವ ಪರಿಸರ ಹಾನಿಯ ವಿಚಾರವು ಇನ್ನಷ್ಟು ಕಳವಳವನ್ನು ಹುಟ್ಟಿಸುತ್ತದೆ. ಉತ್ತಮ ಗುಣಮಟ್ಟದ ಫಲಕಗಳನ್ನು ತಯಾರಿಸಲು ತಗಲುವ ವೆಚ್ಚ ಉಳಿತಾಯ ಮಾಡಲು ಬಳಕೆಗೆ ಬಂದ ಅಗ್ಗದವು ನಗರ ಮತ್ತು ಪಟ್ಟಣಗಳ ಸೌಂದರ್ಯಕ್ಕೆ ಕುತ್ತು ತರುತ್ತಿರುವುದರ ಜತೆಯಲ್ಲೇ, ಪರಿಸರಕ್ಕೆ ಹಾನಿ ಮಾಡುತ್ತಿರುವುದು ಒಂದು ದುರಂತ. ನಗರ ಸಂಸ್ಕೃತಿಯ ಕಪ್ಪುಚುಕ್ಕೆ ಎನಿಸಿರುವ ಫ್ಲೆಕ್ಸ್‌ಗಳ ನಿಯಂತ್ರಣಕ್ಕೆ ಕಠಿಣ ಕ್ರಮ ಕೈಗೊಳ್ಳಲು ಇನ್ನಾದರೂ ಸರಕಾರ ಮುಂದಾಗಬೇಕು. ಈಗ ಇರುವ ಫ್ಲೆಕ್ಸ್ ನಿಯಂತ್ರಣ ಕಾನೂನನ್ನು ಉಲ್ಲಂಘಿಸುವವರನ್ನು ತಕ್ಷಣ ಪತ್ತೆ ಹಚ್ಚಿ, ತೀವ್ರ ಶಿಕ್ಷೆ ನೀಡಬೇಕು. ಆ ಮೂಲಕವಷ್ಟೇ ನಗರ ಸೌಂದರ್ಯ ರಕ್ಷಿಸಲು ಮತ್ತು ಪರಿಸರ ಹಾನಿಯನ್ನು ತಡೆಯಲು ಸಾಧ್ಯ.

ಚಿತ್ರಸ್ಫೂರ್ತಿ

ಹೊಟ್ಟೆಯಲ್ಲಿ ಬೆಂಕಿ ಹೊತ್ತಿಸುವ ಹೆಗ್ಗುರಿ ಪೂರೈಸಿಕೊಳ್ಳಲು ಎಷ್ಟು ನಿರ್ಭೀತರಾಗಿದ್ದರೂ ಸಾಲದು!

ತಿಳಿಸಾರ

ಹೃದ್ರೋಗ, ಕ್ಯಾನ್ಸರ್ ಅತಿ ದೊಡ್ಡ ಮಾರಕ ಬೇನೆಗಳು

ಅಮೆರಿಕದ ಜನರ ಸರಾಸರಿ ಆಯಸ್ಸು 2016ರಲ್ಲಿ 78.7 ಇದ್ದುದು ಮರು ವರ್ಷ 78.6 ಗೆ ಇಳಿಯಿತು. ಇದಕ್ಕೆ ಮುಖ್ಯ ಕಾರಣ ಕ್ಯಾನ್ಸರ್ ಹಾಗೂ ಹೃದ್ರೋಗ ಹೆಚ್ಚಾಗಿದ್ದು ಎಂದು ತಿಳಿದುಬಂದಿದೆ.

ಹೃದ್ರೋಗ 165
ಕ್ಯಾನ್ಸರ್ 152.5

ಇನ್ನಿತರ ಮಾರಕ ರೋಗಗಳೂ ತಮ್ಮದೇ 'ಕಾಣಿಕೆ' ನೀಡಿದ್ದು 1,00,000 ಮರಣಗಳಲ್ಲಿ ಯಾವುದು ಎಷ್ಟು ಸಾವುಗಳಿಗೆ ಕಾರಣ ಎನ್ನುವುದರ ಪಟ್ಟಿ ಕೆಳಗಿನಂತಿದೆ.



ಕಾಕಾ ಹೋಟ್ಲು


ಈ ರಾಮುಲು ಆಪರೇಷನ್ ಕಮಲ ಮಾಡಂಗಿಲ್ಲಾ ಅನ್ನೆತೆ ಮತ್ತೆ?
ಧೀರು
ಅಂಗಾದ್ರೆ ನಂಗ್ಯಾಕೋ ಕುಮಾರಣ್ಣಾ ಆಪರೇಷನ್ನಿಗೆ ಕೈ ಹಾಕ್ಯೆತಾ ಅಂತಾ ಡೌಟು!
ಸುಧೀರು

ಸ್ಮಾರಕಗಳ ಸಂತೆಯಲ್ಲಿ ಆದರ್ಶಗಳು ಸಮಾಧಿಯಾಗದಿರಲಿ!

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ಮೊನ್ನೆ ಕನ್ನಡದ ನಟರೊಬ್ಬರು ಟ್ವೀಟ್ ಮಾಡಿದ್ದರು- 'ನಮ್ಮ ಹೆಸರಿನಲ್ಲಿ ಸ್ಮಾರಕ ಕಟ್ಟಿಸಿಕೊಳ್ಳುವ ಆಸೆ ಇಲ್ಲ. ನಾವು ಸತ್ತ ನಂತರ ನಮ್ಮ ಹೆಸರಿನಲ್ಲಿ ಯಾರೂ ಸ್ಮಾರಕ ಕಟ್ಟಬೇಡಿ. ಸರಕಾರವೇನಾದರೂ ಅಂಥ ಸ್ಮಾರಕ ಕಟ್ಟಬೇಕೆಂದು ನೀವು ಬಯಸಿದರೆ, ನೀವೇ ಒಂದು ಎಕರೆ ಜಾಗವನ್ನು ಬದುಕಿದ್ದಾಗಲೇ ಸರಕಾರಕ್ಕೆ ಕೊಟ್ಟುಬಿಡಿ. ನಿಮ್ಮ ನಂತರ ಸರಕಾರಕ್ಕೆ ಸ್ಮಾರಕ ನಿರ್ಮಿಸಲು ಅನುಕೂಲವಾಗುತ್ತದೆ.'

ಒಳ್ಳೆಯ ಸಲಹೆ ಅನಿಸಿತು. ತಾನು ಸತ್ತ ನಂತರ ಸರಕಾರ ಸ್ಮಾರಕ ನಿರ್ಮಿಸಲಿ ಎಂದು ಆಸೆಪಡುವವರಿಗೆ, ಅವರ ಅಭಿಮಾನಿಗಳಿಗೆ ಇದರಿಂದ ಸ್ವಲ್ಪವೂ ಬೇಸರವಾಗುವುದಿಲ್ಲ. ಮೃತವ್ಯಕ್ತಿ ಸಾಯುವ ಮೊದಲೇ ನೀಡಿದ ಜಾಗದಲ್ಲಿ ಕಟ್ಟಿದ್ದು ಸರೀನಾ, ತಪ್ಪಾ ಎಂಬ ಚರ್ಚೆ, ವಿವಾದ ಉದ್ಭವಿಸುವುದೇ ಇಲ್ಲ. ಇಲ್ಲದಿದ್ದರೆ ನಿಧನರಾದವರು ಎಲ್ಲವನ್ನೂ ಬಿಟ್ಟು ಹೋದರೂ, ಚರ್ಚೆ, ಜಗಳ, ವಿವಾದವನ್ನು ಮಾತ್ರ ಇಲ್ಲಿಯೇ ಇಟ್ಟು ಹೋಗುತ್ತಾರೆ. ಅವರು ನಿಧನರಾಗಿ ಎಷ್ಟೋ ವರ್ಷಗಳಾದ ನಂತರವೂ ಈ ವಿವಾದ ಮಾತ್ರ ಮುಂದುವರಿದಿರುತ್ತದೆ. ನಿಧನರಾದವರಿಗೆ ಇವ್ಯಾವವೂ ಬೇಕಾಗಿರುವುದಿಲ್ಲ ಅವರು ಭಗವಂತನ ಪಾದ ಸೇರಿರುತ್ತಾರೆ. ಆದರೆ ಬದುಕಿರುವವರು ಸತ್ತವರಿಗಾಗಿ ಕಿತ್ತಾಡುತ್ತಿರುತ್ತಾರೆ.

ಅಷ್ಟಕ್ಕೂ ಸ್ಮಾರಕವನ್ನು ಯಾರಿಗೆ ನಿರ್ಮಿಸಬೇಕು? ಯಾರು ನಿರ್ಮಿಸಬೇಕು? ಯಾಕೆ ನಿರ್ಮಿಸಬೇಕು?

ಈ ವಿಷಯದ ಬಗ್ಗೆ ಯಾರಿಗೂ ಸ್ಪಷ್ಟನೆ ಇದ್ದಂತಿಲ್ಲ. ಸರಕಾರದ ಮುಂದೆ ಯಾವ ನೀತಿ ಇದ್ದಂತಿಲ್ಲ. ನಾಗರಿಕ ಸಮಾಜಕ್ಕೂ ಖಚಿತ ನಿಲುವು ಎಂಬುದು ಇದ್ದಂತಿಲ್ಲ. ಗಣ್ಯ ವ್ಯಕ್ತಿಗಳಿಗೆ ಸ್ಮಾರಕ ನಿರ್ಮಿಸುವುದು ಸಂಪ್ರದಾಯ. ಆದರೆ ಮೃತ ವ್ಯಕ್ತಿ ಗಣ್ಯ ಹೌದೋ, ಅಲ್ಲವೋ ಎಂದು ನಿರ್ಧರಿಸುವವರು ಯಾರು? ಅದಕ್ಕೆ ಮಾನದಂಡವೇನು? ಅದಕ್ಕೊಂದು ಸ್ಮಾರಕ-ಸಂಹಿತೆ ಎಂಬುದೇನಾದರೂ ಇದೆಯಾ? ಅಥವಾ ಆಯಾ ಸಂದರ್ಭದಲ್ಲಿ ಅಧಿಕಾರದಲ್ಲಿದ್ದ ಸರಕಾರದ ಮುಖ್ಯಸ್ಥರಿಗೆ ಅನಿಸುವುದೇ ಸಂಹಿತೆಯಾ? ಅವರ ತೀರ್ಮಾನವೇ ಅಂತಿಮವಾ?

ರಾಷ್ಟ್ರಪಿತ ಮಹಾತ್ಮಗಾಂಧಿ ಅವರಿಗೆ ದಿಲ್ಲಿಯ ರಾಜಘಾಟ್‌ನಲ್ಲಿ ಸ್ಮಾರಕ ನಿರ್ಮಿಸಿದ್ದಾರೆ. ದೇಶದ ಮೊದಲ ಪ್ರಧಾನಿಯಾಗಿದ್ದ ಜವಾಹರಲಾಲ ನೆಹರು ಅವರಿಗೆ ದಿಲ್ಲಿಯಲ್ಲಿ ಭವ್ಯ ಸ್ಮಾರಕ ನಿರ್ಮಿಸಲಾಗಿದೆ. ಅದಕ್ಕೆ 'ಶಾಂತಿವನ' ಎಂದು ಹೆಸರು. ಆನಂತರ ಪ್ರಧಾನಿಯಾಗಿ ನಿಧನರಾದ ಲಾಲ ಬಹಾದ್ದೂರ್ ಶಾಸ್ತ್ರಿ(ಕಿಸಾನ್ ಘಾಟ್), ಇಂದಿರಾಗಾಂಧಿ(ಶಕ್ತಿ ಸ್ಥಳ), ರಾಜೀವಗಾಂಧಿ ಅವರಿಗೆ ಸ್ಮಾರಕ ನಿರ್ಮಿಸಲಾಗಿದೆ. ಅಂದರೆ ಪ್ರಧಾನಿಯಾಗಿದ್ದವರಿಗೆ ಸರಕಾರ ಸ್ಮಾರಕ ಕಟ್ಟಿಸುತ್ತದೆ ಎಂದಾಯಿತು. ಆದರೆ ಇದೇ ಮಾನದಂಡವನ್ನು ಎರಡು ಸಲ ಹಂಗಾಮಿ ಪ್ರಧಾನಿಯಾಗಿದ್ದ ಗುಲ್ಜಾರಿಲಾಲ ನಂದಾ ಅವರಿಗೆ ಅನುಸರಿಸಲಿಲ್ಲ. ಅವರು ಹಂಗಾಮಿ ಆಗಿದ್ದರು, ಹೀಗಾಗಿ ಅವರಿಗೆ ಸ್ಮಾರಕ ಕಟ್ಟಿಸಿಲ್ಲ ಎಂದು ವಾದಿಸಬಹುದು, ಒಪ್ಪೋಣ. ಆದರೆ ಅದಾದ ನಂತರ ಭಾರತದ ಪ್ರಧಾನಿಯಾದ ಮೊರಾರ್ಜಿ ದೇಸಾಯಿ ಅವರಿಗೆ ದಿಲ್ಲಿಯಲ್ಲಿ ಸ್ಮಾರಕ ಕಟ್ಟಬೇಕು ಎಂದು ಯಾವ ಸರಕಾರಕ್ಕೂ ಅನಿಸಲಿಲ್ಲ. ಗುಜರಾತಿನ ಅಹಮದಾಬಾದ್‌ನ ಸಬರಮತಿ ನದಿ ದಡದಲ್ಲಿ ಮೊರಾರ್ಜಿ ಅವರಿಗೆ ಸ್ಮಾರಕ (ಅಭಯ ಘಾಟ್) ನಿರ್ಮಿಸಲಾಗಿದೆ. ಮಾಜಿ ಪ್ರಧಾನಿಗೆ ದಿಲ್ಲಿಯಲ್ಲಿ ಸ್ಮಾರಕ ಕಟ್ಟಬೇಕೆಂಬುದು ಸಂಪ್ರದಾಯವಾದರೆ, ಅದನ್ನು ಒಪ್ಪುವುದಾದರೆ, ನೆಹರು, ಇಂದಿರಾ, ರಾಜೀವ ನಂತರ ಪ್ರಧಾನಿಯಾದ ಚರಣ್‌ಸಿಂಗ್, ಚಂದ್ರಶೇಖರ, ವಿ.ಪಿ. ಸಿಂಗ್, ಐ.ಕೆ. ಗುಜ್ರಾಲ ಅವರಿಗೆ ದಿಲ್ಲಿಯಲ್ಲೇಕೆ ಭವ್ಯ ಸ್ಮಾರಕ ನಿರ್ಮಿಸಲಿಲ್ಲ? ಕಾಂಗ್ರೆಸ್ ಪಕ್ಷದವರೇ ಆಗಿದ್ದ ಪಿ.ವಿ. ನರಸಿಂಹರಾಯರಿಗೆ ಒಂದು ಸ್ಮಾರಕ ನಿರ್ಮಿಸಲು ಅವರು ನಿಧನರಾಗಿ ಹತ್ತುವರ್ಷಗಳು ಬೇಕಾದವು.

ಬರೀ ಪ್ರಧಾನಿಗಳಿಗೆ ಮಾತ್ರ ಸ್ಮಾರಕವಾ, ರಾಷ್ಟ್ರಪತಿಗಳಿಗೆ ಸ್ಮಾರಕ ಏಕಿಲ್ಲ ಎಂಬ ಪ್ರಶ್ನೆ ಎದುರಾಯಿತು. ಅಲ್ಲದೇ ದೇಶದ ಪ್ರಧಾನಿಯಾದವರೆಲ್ಲರಿಗೂ ಹೀಗೆ ಸ್ಮಾರಕ ನಿರ್ಮಿಸುತ್ತಾ ಹೋದರೆ, ಮುಂದೊಂದು ದಿನ ರಾಜಧಾನಿ ಸ್ಮಾರಕಗಳ ನಗರವಾಗಬಹುದು, ಅಲ್ಲದೇ ಸ್ಮಾರಕ ನಿರ್ಮಾಣದಲ್ಲೂ ತಾರತಮ್ಯವಾಗಬಹುದೆಂದು ಅನಿಸಿ, ಈಗ ದಿಲ್ಲಿಯಲ್ಲಿ 'ಏಕತಾಸ್ಥಳ' ಎಂಬ ಸ್ಮಾರಕ ನಿರ್ಮಿಸಲಾಗಿದೆ. ಅದು ರಾಷ್ಟ್ರಪತಿ, ಪ್ರಧಾನಿಗಳ ಸಮಾಧಿ. ಸಾವಿನಲ್ಲೂ ಅದೃಷ್ಟ ಮಾಡಿದವರೆಂದರೆ ನೆಹರು, ಇಂದಿರಾ ಹಾಗೂ ರಾಜೀವಗಾಂಧಿ. ಇವರಿಗೆ ತಮ್ಮದೆನ್ನುವ, ಭವ್ಯ ಸ್ಮಾರಕಗಳಿವೆ. ಉಳಿದವರು ಪ್ರಧಾನಿಗಳಾಗಿರಬಹುದು, ಆದರೆ ಅವರಷ್ಟು ಅದೃಷ್ಟವಂತರಲ್ಲ. 'ಭಾರತದ ಉಕ್ಕಿನ ಮನುಷ್ಯ'ರೆಂದೇ ಖ್ಯಾತರಾದ ಸರ್ದಾರ ಪಟೇಲರು ಪ್ರಧಾನಿಯೇನೂ ಆಗಿರಲಿಲ್ಲ. ಅವರು ನೆಹರು ಮಂತ್ರಿಮಂಡಲದಲ್ಲಿ ಗೃಹಸಚಿವರಾಗಿದ್ದರು. ಪ್ರಧಾನಿ ಪದವಿಗೆ ಪ್ರಬಲ ಆಕಾಂಕ್ಷಿ ಆಗಿದ್ದರು. ಆದರೆ ಅವರು ನಿಧನರಾದ ಅರವತ್ತೆಂಟು ವರ್ಷಗಳ ನಂತರ, ನರೇಂದ್ರ ಮೋದಿ ಸರಕಾರ, ಸುಮಾರು ಮೂರು ಸಾವಿರ ಕೋಟಿ ರುಪಾಯಿ ವೆಚ್ಚದಲ್ಲಿ ವಿಶ್ವದ ಅತಿ ಎತ್ತರದ, ವಿಶ್ವವೇ ಮೂಕವಿಸ್ಮಿತವಾಗುವ ಪಟೇಲರ ಪ್ರತಿಮೆ ನಿಲ್ಲಿಸಿ, ಬೃಹತ್ ಭವ್ಯ ಸ್ಮಾರಕ ಸ್ಥಾಪಿಸಿದೆ. ಪ್ರಧಾನಿ ಆಗದಿದ್ದರೂ ಪರವಾಗಿಲ್ಲ, ಅಷ್ಟು ವರ್ಷ ಕಾದಿದ್ದೂ ಸಾರ್ಥಕವಾಯಿತು ಎಂಬಂತೆ ವಿಶ್ವದ ಅತಿ ಎತ್ತರದ ಸ್ಮಾರಕ ನಿರ್ಮಾಣವಾಯಿತು. ಈ ವಿಷಯದಲ್ಲಿ ಪಟೇಲರು ಮಹಾತ್ಮ ಗಾಂಧಿಗಿಂತ ಅದೃಷ್ಟವಂತರು. ಹುತಾತ್ಮರಾದರೆ ಈ ರೀತಿ ಆಗಬೇಕು. ನರೇಂದ್ರ ಮೋದಿಯವರಲ್ಲದೇ ಬೇರೆ ಯಾರೇ ಪ್ರಧಾನಿ ಆಗಿದ್ದರೂ ಪಟೇಲರಿಗಾಗಿ ಇಂಥ ಸ್ಮಾರಕ ನಿರ್ಮಿಸುತ್ತಿರಲಿಲ್ಲ. ಸ್ವಾತಂತ್ರ್ಯನಂತರ ಅರ್ಧ ಶತಮಾನ ಕಾಂಗ್ರೆಸ್ಸೇ ದೇಶವನ್ನಾಳಿದರೂ, ಪಟೇಲರಿಗೊಂದು ಸ್ಮಾರಕ ಕಟ್ಟಬೇಕೆಂದು ಆ ಪಕ್ಷದ ನಾಯಕರಿಗೆ ಅನಿಸಲಿಲ್ಲ. ಆದರೆ ಮೋದಿಯವರು ಆ ಪಕ್ಷದವರಲ್ಲದಿದ್ದರೂ, ಮಹಾತ್ಮ ಗಾಂಧಿ ಅವರಿಗೆ ನಿರ್ಮಿಸಲಾದ ಸ್ಮಾರಕಕ್ಕಿಂತ ಎಷ್ಟೋ ಪಟ್ಟು ಭವ್ಯವಾದ ಸ್ಮಾರಕ ನಿರ್ಮಿಸಿದರು.

ಅದಕ್ಕೇ ಅನ್ನೋದು, ನಮ್ಮಲ್ಲಿ ಒಂದು ಸ್ಮಾರಕ-ಸಂಹಿತೆ ಎಂಬುದೇ ಇಲ್ಲ. ಗಣ್ಯವ್ಯಕ್ತಿಗಳೆಂದರೆ ಯಾರು, ಕೇವಲ ರಾಜಕಾರಣಿಗಳು, ಅಧಿಕಾರದಲ್ಲಿದ್ದವರು ಮಾತ್ರ ಗಣ್ಯರಾ, ಅವರ ಹೊರತಾಗಿ ಸಮಾಜದಲ್ಲಿ, ದೇಶದಲ್ಲಿ ಗಣ್ಯವ್ಯಕ್ತಿಗಳೇ ಇಲ್ಲವಾ? ಯಾವ ಪಕ್ಷ ಅಧಿಕಾರದಲ್ಲಿ ಇದೆಯೋ, ಅವರಿಗೆ ಯಾರು ಇಷ್ಟವೋ, ಅವರಿಗೆ ಸ್ಮಾರಕ ಕಟ್ಟುವ ಕೆಟ್ಟ ಸಂಪ್ರದಾಯ ಬೆಳೆದು ಬಂದಿದೆ. ಸಾಯುವಾಗ ಯಾವ ಪಕ್ಷ ಅಧಿಕಾರದಲ್ಲಿದೆ, ಯಾರು ಮುಖ್ಯಮಂತ್ರಿಯಾಗಿದ್ದಾರೆ, ಅವರು ತನ್ನ ಜಾತಿಯವನಾ ಎಂಬುದನ್ನೆಲ್ಲ ಯೋಚಿಸಿ ಸಾಯಬೇಕು. ಬೇರೆ ಪಕ್ಷದವರಾದರೆ, ಬೇರೆ ಜಾತಿಯವರಾದರೆ, 'ಸ್ಮಾರಕ ಭಾಗ್ಯ' ಸಿಗಲಿಕ್ಕಿಲ್ಲ, ನಾಯಿಗೆ ಮೂತ್ರ ಮಾಡಲು ಲಾಯಕ್ಕಾದ ಮೈಲಿಗಲ್ಲಿನಂಥ ಸ್ಮಾರಕ ನಿರ್ಮಿಸಬಹುದು. ನಮ್ಮ ಪಕ್ಷ, ನಮ್ಮ ಜಾತಿಯವರಾದರೆ ಭವ್ಯ ಸ್ಮಾರಕ ಭಾಗ್ಯ! ಬದುಕಲು ಮಾತ್ರ ಅಲ್ಲ, ಸತ್ತ ಮೇಲೂ ಅದೃಷ್ಟ ಮಾಡಿರಬೇಕು!

ಅಷ್ಟಕ್ಕೂ ಸ್ಮಾರಕ ಕಟ್ಟುವ ಉದ್ದೇಶವಾದರೂ ಏನು? ಇಂಥ ಒಬ್ಬ ವ್ಯಕ್ತಿ ಇದ್ದರು, ಇವರು ಇಷ್ಟೆಲ್ಲ ಒಳ್ಳೆಯ ಕೆಲಸ ಮಾಡಿದರು, ಅವರ ಆದರ್ಶಗಳು, ಪ್ರತಿಪಾದಿಸಿದ ನಂಬಿಕೆ, ಮೌಲ್ಯ, ಜೀವನ ಸಿದ್ಧಾಂತಗಳು ಶಾಶ್ವತವಾಗಿರಬೇಕು, ಮುಂದಿನ ಪೀಳಿಗೆಗೆ ದಾರಿದೀಪವಾಗಬೇಕು, ಅನುಕರಣೀಯವಾಗಬೇಕು, ಅವರ ಸ್ಮಾರಕಕ್ಕೆ ಭೇಟಿ ನೀಡಿದವರಿಗೆ ಅವರ ಸ್ಮರಣೆ ಪ್ರೇರಣೆ, ಸ್ಫೂರ್ತಿಯಾಗಬೇಕು, ತಾನೂ ಅಂಥ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂಬ ಚೇತೋಹಾರಿ, ಪವಿತ್ರ ಭಾವ ಸ್ಫುರಿಸಬೇಕೆಂಬ ಉದಾತ್ತ ಉದ್ದೇಶದಿಂದ ಸ್ಮಾರಕಗಳನ್ನು ನಿರ್ಮಿಸುವ ಸಂಪ್ರದಾಯವನ್ನು ಜಗತ್ತಿನೆಲ್ಲೆಡೆ ಪಾಲಿಸಿಕೊಂಡು ಬರಲಾಗುತ್ತಿದೆ. ಹೀಗಾಗಿ ಯಾರ‍್ಯಾರಿಗೋ, ಕೋಲ್ಯ, ಕೊಲ್ಕಾ, ಕೊಮ್ಯನಿಗೆಲ್ಲ ಸ್ಮಾರಕ ಕಟ್ಟುವುದಿಲ್ಲ. ಕೋಲ್ಯನಿಗೆ ಕೋಟ್ಯಂತರ ಅಭಿಮಾನಿಗಳಿರಬಹುದು, ಅಭಿಮಾನಿಗಳಿರುವುದು ಸ್ಮಾರಕ ನಿರ್ಮಿಸಲು ಅಳತೆಗೋಲಲ್ಲ. ಆ ಅಭಿಮಾನಿಗಳು ಅಭಿಮಾನಿಗಳ ಸಂಘ ಕಟ್ಟಿಕೊಳ್ಳಲಿ, ಯಾರೂ ಬೇಡ ಎನ್ನುವುದಿಲ್ಲ. ಆದರೆ ಅದೇ ಅಭಿಮಾನಿಗಳು ಹೇಳಿದ್ದಾರೆಂದು ಸ್ಮಾರಕ ನಿರ್ಮಿಸಲು ಹೊರಟರೆ, 'ಆರಾಧ್ಯದೈವ'ನಿಗೆ ಅವಮಾನ ಮಾಡಿದಂತೆ. ಕಾರಣ ಯಾವ ಪರಮ ಪವಿತ್ರ, ಉದಾತ್ತ ಧ್ಯೇಯಗಳಿಗಾಗಿ ಈ ಪ್ರತಿಮೆ ಸ್ಥಾಪಿಸಿದ್ದೀರಿ ಎಂದು ಮುಂದಿನ ಪೀಳಿಗೆ ಪ್ರಶ್ನಿಸಿದರೆ, ಅದಕ್ಕೆ ಉತ್ತರಿಸಬೇಕಾಗುತ್ತದೆ. ಇಲ್ಲದಿದ್ದರೆ 'ಆರಾಧ್ಯದೈವ'ನಿಗೆ ಅಪಚಾರ ಮಾಡಿದಂತಾಗುತ್ತದೆ.

ಅಮೆರಿಕದಲ್ಲಿ 'ಹೂವರ್ ಡ್ಯಾಮ್'ನಿರ್ಮಿಸುವಾಗ, ಅಲ್ಲಿನ ಕಾರ್ಮಿಕರನ್ನು ಬೆಳಗ್ಗೆ ಎಬ್ಬಿಸಿ, ಅವರ ಬಿಡಾರಗಳನ್ನು ಕಾಯುತ್ತಿದ್ದ ನಾಯಿ, ಸರಕು ಸಾಗಣೆ ಲಾರಿ ಚಕ್ರಕ್ಕೆ ಸಿಲುಕಿ ಸತ್ತು ಹೋಯಿತು. ಅಣೆಕಟ್ಟಿನ ಪಕ್ಕದಲ್ಲಿಯೇ ಆ ನಾಯಿಗೊಂದು ಸ್ಮಾರಕ ಕಟ್ಟಿದ್ದಾರೆ. ಆ ನಾಯಿಯ ಪುಟ್ಟದಾದ ಜೀವನ ವೃತ್ತಾಂತವಿದೆ. ಆ ನಾಯಿ ಅಣೆಕಟ್ಟು ನಿರ್ಮಿಸಿದ ಕಾರ್ಮಿಕರಿಗೆ ಹೇಗೆ ಮುದ, ಸಂತಸ ನೀಡಿ ಅವರ ದೈನಂದಿನ ಜೀವನದಲ್ಲಿ ಪ್ರೀತಿಪಾತ್ರವಾಗಿತ್ತೆಂಬುದನ್ನು ಬರೆದಿದ್ದಾರೆ. ಆ ನಾಯಿ ಸ್ಮಾರಕಕ್ಕೆ ಭೇಟಿ ನೀಡಿದವರಿಗೆ ಕಾಯಕ ಪ್ರೀತಿಯ ಹೃದಯಂಗಮ ಕತೆ ಬಿಚ್ಚಿಕೊಳ್ಳುತ್ತದೆ. ಮೂಕ ಪ್ರಾಣಿಯೊಂದು ಮಾನವ ಸಂವೇದನೆಗೆ ಮಿಡಿದ ಆಪ್ತಭಾವ ಜಿನುಗುತ್ತದೆ. ನಾಯಿಗಾಗಿ ಕಟ್ಟಿದ ಸ್ಮಾರಕದಲ್ಲೂ ಒಂದು ಆದರ್ಶ ಗುಣದಲ್ಲಿ ಆರ್ದ್ರವಾದ ಸಾರ್ಥಕ ಭಾವ ಅಲ್ಲಿಗೆ ಭೇಟಿ ನೀಡಿದವರ ಮನಸ್ಸಿನಲ್ಲಿ ತೇಲುತ್ತದೆ.

ಅಂದರೆ ಆ ಶ್ವಾನ ಸ್ಮಾರಕವೂ ನಮಗೊಂದು ಬದುಕಿನ ಪಾಠ ಹೇಳುತ್ತದೆ. ಇಲ್ಲಿ ನಮಗೆ ಶ್ವಾನ ಮುಖ್ಯ ಅಲ್ಲ, ಅದು ಬಿಟ್ಟು ಹೋದ ಆದರ್ಶ ಮಾತ್ರ. ಹೀಗಾಗಿ ಸ್ಮಾರಕವನ್ನು ಗಣ್ಯರಿಗೆ ಮಾತ್ರ ಅಲ್ಲ, ಸಾಮಾನ್ಯರಲ್ಲಿ ಸಾಮಾನ್ಯನಿಗೂ, ನಾಯಿಯಂಥ ಮೂಕ ಪ್ರಾಣಿಗೂ ಕಟ್ಟಬಹುದು. ಇನ್ನು ನೂರು ವರ್ಷಗಳ ನಂತರ, ಈ ಶ್ವಾನ ಸ್ಮಾರಕ ಕೋಟ್ಯಂತರ ಜನರಲ್ಲಿ ಮಾನವ ಸಂವೇದನೆಗೆ ಬರೆದ ಹೊಸ ಭಾಷ್ಯದಂತೆ ನಮ್ಮಲ್ಲೊಂದು ಅನನ್ಯಭಾವವನ್ನು ಉದ್ದೀಪಿಸುತ್ತಲೇ ಇರುತ್ತದೆ. ಇಲ್ಲಿ ನಾಯಿಯ ಗುಣದಂತೆ, ಅದನ್ನು ಗುರುತಿಸಿದ ಮನುಷ್ಯನ ಗುಣವೂ ಅಷ್ಟೇ ಮುಖ್ಯ. ಮನುಷ್ಯ ಆ ನಾಯಿಗೊಂದು ಸ್ಮಾರಕ ಕಟ್ಟಿ ಮನುಷ್ಯತ್ವ ಮೆರೆದಿದ್ದಾನೆ. ಕಾರಣ ಅಲ್ಲೊಂದು ಅಮರ ಸಂದೇಶವಿದೆ. ಅದು ಆ ಸ್ಮಾರಕದಲ್ಲಿ ಹರಳುಗಟ್ಟಿದೆ. ಆ ಸ್ಮಾರಕ ಸಣ್ಣದಾಗಿರಬಹುದು. ಆದರೆ ಅದು ಬೀರುವ ಸಂದೇಶ ಮಾತ್ರ ಅನೂಹ್ಯವಾದುದು.



ಆದ್ದರಿಂದ ನಾವು ಯಾರಿಗೆ ಸ್ಮಾರಕ ಕಟ್ಟುತ್ತೇವೆಂಬುದು ಮುಖ್ಯ ಅಲ್ಲ, ಅವರ ಯಾವ ಸಾಧನೆ, ಯಾವ ಆದರ್ಶ ಗುಣಗಳಿಗೆ ಅದನ್ನು ಕಟ್ಟುತ್ತಿದ್ದೇವೆಂಬುದು ಬಹಳ ಮುಖ್ಯ. ಇವರಂತೆ ನೀವೂ ಬದುಕನ್ನು ರೂಪಿಸಿಕೊಳ್ಳಬೇಕು ಎಂದು ನಮ್ಮ ಮಕ್ಕಳಿಗೆ ಯಾರ ಬಗ್ಗೆ ಹೇಳುತ್ತೇವೋ, ಅಂಥವರ ಸ್ಮಾರಕ ಕಟ್ಟಿದರೆ ಅದಕ್ಕೊಂದು ಬೆಲೆ. ಇಲ್ಲಿ ವ್ಯಕ್ತಿಗಿಂತ ಆದರ್ಶಗಳೇ ಮುಖ್ಯವಾಗುತ್ತವೆ. ದಕ್ಷಿಣ ಆಫ್ರಿಕಾದ ಕೇಪ್ ಟೌನ್‌ನಲ್ಲಿ ಪೌರ ಕಾರ್ಮಿಕನೊಬ್ಬನ ಪ್ರತಿಮೆ ನಿಲ್ಲಿಸಿದ್ದಾರೆ. ಆ ನಗರದ ಸೌಂದರ್ಯವರ್ಧನೆ, ಸ್ವಚ್ಛತೆ, ನೈರ್ಮಲ್ಯದ ಪ್ರತೀಕವಾಗಿ ಆ ಪ್ರತಿಮೆ ಕಟ್ಟಿದ್ದಾರೆ. ಇಲ್ಲಿ ವ್ಯಕ್ತಿ ಗೌಣ. ಆತನ ಆದರ್ಶಗಳೇ ಪುತ್ಥಳಿಯಾಗಿದೆ. ಆತ ಬಿಟ್ಟು ಹೋದ ಕಾಳಜಿಗಳೇ 'ಪ್ರತಿಮಾ ರೂಪ'ವಾಗಿ ಅಲ್ಲಿ ನಿಂತಿದೆ. ಅದನ್ನು ನೋಡಿದ ಎಂಥವರಿಗಾದರೂ ನಗರ ಸ್ವಚ್ಛತೆಗಾಗಿ ಮುಡಿಪಾಗಿಟ್ಟ ಒಬ್ಬ ಅಪರೂಪದ ವ್ಯಕ್ತಿಯ ಜೀವನದರ್ಶನ, ಮೌಲ್ಯಗಳ ಅನಾವರಣವಾಗದೇ ಹೋಗುವುದಿಲ್ಲ. ಅಲ್ಲಿಗೆ ಹೋದವರು ವಾಪಸ್ ಬರುವಾಗ ಒಂದಷ್ಟು ಆದರ್ಶ ಗುಣಗಳಿಂದ ಪ್ರೇರಿತರಾಗಿ ಬರುತ್ತಾರೆ.

ಆದರೆ ನಾವು ಯಾರ ಸ್ಮರಣಾರ್ಥ, ಸರಕಾರಿ ಖರ್ಚಿನಲ್ಲಿ ಸ್ಮಾರಕ ನಿರ್ಮಿಸುತ್ತೇವೋ, ಆ ವ್ಯಕ್ತಿಯಲ್ಲಿ ಯಾವ ಆದರ್ಶ ಗುಣಗಳೇ ಇಲ್ಲದಿದ್ದರೆ, ಅವರು ಮಾದರಿ ಅಥವಾ ಅನುಕರಣೀಯರಲ್ಲದಿದ್ದರೆ, ನಾವು ಸಮಾಜಕ್ಕೆ ಎಂಥ ಸಂದೇಶ ನೀಡುತ್ತಿದ್ದೇವೆ ಎಂಬುದನ್ನು ಗಂಭೀರವಾಗಿ ಯೋಚಿಸಬೇಕಾಗುತ್ತದೆ. ಇವರಂತೆ ಯಾರೂ ಬದುಕಬಾರದು, ಆ ಎಚ್ಚರಿಕೆ ನೀಡಲು ಅವರ ಸ್ಮಾರಕ ಕಟ್ಟುತ್ತಿದ್ದೇವೆ ಎಂದು ಸ್ಪಷ್ಟಪಡಿಸಿದರೆ, ಅದೂ ಒಳ್ಳೆಯದೇ. ಆದರೆ ಈ ವ್ಯತ್ಯಾಸ ಅರಿಯದೇ ಸ್ಮಾರಕ ನಿರ್ಮಿಸಿದರೆ ಸಮಾಜಕ್ಕೆ ದೊಡ್ಡ ದ್ರೋಹ ಬಗೆದಂತಾಗುತ್ತದೆ. ಮುಂದಿನ ಪೀಳಿಗೆಗೆ ಕೆಟ್ಟ ಸಂಪ್ರದಾಯ ಹಾಕಿದಂತಾಗುತ್ತದೆ. ಯೋಗ್ಯರನ್ನು ಕಡೆಗಣಿಸುವುದು ಎಷ್ಟು ಕ್ರೂರವೋ, ಅಪಾತ್ರರನ್ನು ಮೆರೆಯಿಸುವುದು, ವೈಭವೀಕರಿಸುವುದು ಸಹ ಅಷ್ಟೇ ಕ್ರೂರವಾದುದು. ಇವೆರಡರಿಂದ ತಮ್ಮ ಸಂದೇಶಗಳು ರವಾನೆಯಾಗುತ್ತದೆ.

ಕೆಲವರು ಮಹಾನ್ ವ್ಯಕ್ತಿಗಳೆಂದು ಕರೆಯಿಸಿಕೊಳ್ಳುತ್ತಾರೆ. ಆದರೆ ಅವರ ಹೆಂಡತಿಯೇ ತನ್ನ ಮಕ್ಕಳು ಅಪ್ಪನಂತೆ ಆಗಲಿ ಎಂದು ಆಶಿಸುವುದಿಲ್ಲ. ಅನ್ಯಾನ್ಯ ಕಾರಣಗಳಿಂದ ಅವರು ಪ್ರಸಿದ್ಧಿಗೆ ಬಂದು ದೊಡ್ಡವರೆನಿಸಿಕೊಳ್ಳುತ್ತಾರೆ. ಇಂಥವರಿಗೆಲ್ಲ ಊರ ಮಧ್ಯದಲ್ಲಿ ಸ್ಮಾರಕ ಕಟ್ಟಿಸಿದರೆ ಅದು ಆ ಸಮಾಜದ ಮನಸ್ಥಿತಿಯನ್ನು ತೋರಿಸುತ್ತದೆ.

ಅಷ್ಟಕ್ಕೂ ಯಾರ ಹೆಸರಿನಲ್ಲಿ, ಪ್ರಮುಖ ಸ್ಥಳದಲ್ಲಿ ಸ್ಮಾರಕ ಕಟ್ಟುತ್ತೇವೋ, ಅವರು ಮಾತ್ರ ಉದಾತ್ತ ಜೀವಿಗಳು, ಮಹಾನ್ ವ್ಯಕ್ತಿಗಳು ಎಂದು ಭಾವಿಸಬೇಕಿಲ್ಲ. ಒಬ್ಬನ ಸಾಧನೆ, ಮಹಾನ್ ಗುಣ, ಆದರ್ಶ ಜೀವನ, ಸಂಪನ್ನತೆಗಳೆಲ್ಲ ಸ್ಮಾರಕದಲ್ಲಿ ಅಡಕವಾಗಿಲ್ಲ, ಅವುಗಳಿಗೆ ಸ್ಮಾರಕ ಮಾನದಂಡ ಅಲ್ಲ. ಸಾವಿರ ಅರ್ಹ, ಯೋಗ್ಯ ವ್ಯಕ್ತಿಗಳಿಗೆ ಸ್ಮಾರಕ ಕಟ್ಟದಿದ್ದರೆ ಏನೂ ಆಗುವುದಿಲ್ಲ, ಅವರು ಪ್ರತಿಪಾದಿಸಿದ ಸಿದ್ಧಾಂತ, ಆದರ್ಶ, ಧ್ಯೇಯ, ನಿಷ್ಠೆ, ತತ್ತ್ವ, ಸಂದೇಶಗಳೆಲ್ಲ ನಿರರ್ಥಕವಾಗುವುದಿಲ್ಲ, ಅವುಗಳನ್ನು ಸ್ಮಾರಕದಲ್ಲಿ ಸಂಗ್ರಹಿಸಿಡಬೇಕಿಲ್ಲ. ಆದರೆ ಒಬ್ಬೇ ಒಬ್ಬ ಅಪಾತ್ರನಿಗೆ ಸ್ಮಾರಕ ಕಟ್ಟಿಸಿದರೆ ಅದರಿಂದ ಆಗುವ ಅನಾಹುತ ಅಷ್ಟಿಷ್ಟಲ್ಲ. ಸ್ಮಾರಕ ಕಟ್ಟುವವರಿಗೆ, ಕಟ್ಟಬೇಕೆಂದು ಒತ್ತಾಯಿಸುವವರಿಗೆ ಈ ಎಚ್ಚರ ಇರಬೇಕಾಗುತ್ತದೆ. ಇಲ್ಲದಿದ್ದರೆ ಬೇರೆ ಯಾರಿಗೂ ಅಲ್ಲ, ನಾವು ಯಾರ ಹೆಸರಿನಲ್ಲಿ ಸ್ಮಾರಕ ಕಟ್ಟುತ್ತೇವೋ ಅವರಿಗೇ ಮಾರಕವಾದಂತಾಗುತ್ತದೆ. ಅದು ಒಬ್ಬ ಸಾಹಿತಿಯ ಕೆಟ್ಟ ಕೃತಿಗೆ ಪ್ರತಿಷ್ಠಿತ ಬಹುಮಾನ ನೀಡಿ ಅವಮಾನಿಸಿದಂತೆ.

ಒಬ್ಬ ವ್ಯಕ್ತಿ ಸತ್ತಾಗ, ಅವನಿಗೆ ಸ್ಮಾರಕ ನಿರ್ಮಿಸಿದರೆ, ಅವನ ತತ್ತ್ವ, ಜೀವನ ಸಂದೇಶಗಳಿಂದ ಅವನಿಗೆ ಜೀವ ಕೊಟ್ಟ ಹಾಗೆ, ಅವನನ್ನು ಪುನಃ ಜೀವಂತವಾಗಿ ನಿಲ್ಲಿಸಿದ ಹಾಗೆ. ಆತ ತನ್ನ ಸ್ಮಾರಕದಿಂದಲೇ ಸಮಾಜಕ್ಕೆ ತನ್ನ ನಂಬಿಕೆ, ತಾನು ಬಿಟ್ಟು ಹೋದ ಆದರ್ಶ

ಗುಣಗಳಿಂದ ಸಂದೇಶ ನೀಡುತ್ತಾ ಹೋಗುತ್ತಾನೆ ಎಂಬುದನ್ನು ನಾವು ಮರೆಯಬಾರದು. ಆದ್ದರಿಂದ ಸ್ಮಾರಕ ನಿರ್ಮಾಣವೆನ್ನುವುದು ಹುಡುಗಾಟಿಕೆಯಲ್ಲ, ಪಡಪೋಶಿ ನಡೆಯಲ್ಲ, ಅಟ್ರಾಕಣಿ ವ್ಯವಹಾರವಲ್ಲ. ಅದೊಂದು ಅತ್ಯಂತ ಜವಾಬ್ದಾರಿಯುತ ಸಾಮಾಜಿಕ ನಡೆ, ಕರ್ತವ್ಯ, ಹೊಣೆಗಾರಿಕೆ. ಸ್ಮಾರಕ ನಿರ್ಮಾಣದಲ್ಲಿ ಸಮಾಜ ನಿರ್ಮಾಣವೂ ಅಡಗಿದೆ ಎಂಬ ವಿವೇಕ ನಮಗಿರಬೇಕು.

ನಿಮಗೆ ಗೊತ್ತಿರಬಹುದು, ಇರಾಕ್ ಅಧ್ಯಕ್ಷ ಸದ್ದಾಂ ಹುಸೇನ್ ತಾನು ಬದುಕಿರುವಾಗಲೇ ಬಾಗ್ದಾದ್ ನಗರದ ಮಧ್ಯಭಾಗದಲ್ಲಿ ತನ್ನ ಎತ್ತರದ ಪ್ರತಿಮೆ ಸ್ಥಾಪಿಸಿಕೊಂಡಿದ್ದ. ಅದು ಆತನ ಅಹಂಕಾರದ ಪ್ರತೀಕವಾಗಿತ್ತೇ ಹೊರತು, ಆತನ ಘನ ಕಾರ್ಯದ ದ್ಯೋತಕವಾಗಿರಲಿಲ್ಲ. ತಾನು ಸತ್ತ ನಂತರ ಯಾರೂ ತನ್ನ ಪ್ರತಿಮೆ ಅಥವಾ ಸ್ಮಾರಕ ಸ್ಥಾಪಿಸುವುದಿಲ್ಲ ಎಂಬುದು ಆತನಿಗೆ ಗೊತ್ತಿತ್ತು. ಕಾರಣ ಅಂಥ ಘನದಾರಿ ಕೆಲಸವನ್ನು ತಾನು ಮಾಡಿಲ್ಲವೆಂಬುದು ಅವನಿಗೆ ಅನಿಸಿರಬೇಕು. ಅದಕ್ಕಾಗಿ ಮರ್ಯಾದೆ ಬಿಟ್ಟು ಆತ ತನ್ನ ಪ್ರತಿಮೆ ನಿರ್ಮಾಣಕ್ಕೆ ಮುಂದಾಗಿದ್ದ.

ನಮ್ಮ ಪ್ರತಿಮೆಯನ್ನು ನಾವು ಜೀವಂತವಿರುವಾಗ ನಾವೇ ನಿರ್ಮಿಸಿಕೊಳ್ಳುವುದು ಪರಮ ಲಜ್ಜೆಗೇಡಿತನದ ಪರಾಕಾಷ್ಠೆ. ಇಂಥ ಸಣ್ಣ ಸಂಗತಿಯೂ ಅವನಿಗೆ ಗೊತ್ತಿರಲಿಲ್ಲ. ಹೀಗಾಗಿ ತನ್ನ ಪ್ರತಿಮೆಯನ್ನೇ ದೊಡ್ಡದಾಗಿ ನಿಲ್ಲಿಸಿಕೊಂಡಿದ್ದ. ಆದರೆ ಸದ್ದಾಂ ಬದುಕಿದ್ದಾಗಲೇ, ಅಲ್ಲಿನ ಜನ ಅದನ್ನು ಉರುಳಿಸಿದರು. ಉರುಳಿಬಿದ್ದ ಪ್ರತಿಮೆಗೆ ಜನ ಕಾಲಿನಿಂದ ಒದ್ದರು, ಕಲ್ಲಿನಿಂದ ಹೊಡೆದರು. ಸದ್ದಾಂನ ಅಹಂಕಾರವನ್ನು ನಿರ್ನಾಮ ಮಾಡಿದರು. ಯಾವ ಪ್ರತಿಮೆ, ಸ್ಮಾರಕ ಅವನ ಸಾಧನೆಯನ್ನು ಮೆರೆಯುವ ದ್ಯೋತಕವಾಗಬೇಕಿತ್ತೋ, ಅದೇ ಸ್ಮಾರಕದಲ್ಲಿ ಆತನ ಇಡೀ ವ್ಯಕ್ತಿತ್ವವೇ ಸಮಾಧಿಯಾಯಿತು. ಆತನ ಪ್ರತಿಮೆ ಹೊಡೆದುರುಳಿಸಿದ್ದು ಆತನ ವ್ಯಕ್ತಿತ್ವ ನಿರ್ನಾಮದ ಸಂಕೇತವಾಯಿತು. ಅವನ ಪ್ರತಿಮೆಯಿಂದ ಅವನ ಗೌರವ ಹೆಚ್ಚಾಗಲಿಲ್ಲ, ಅದೇ ಅವನ ಅವನತಿಯ ಸಂಕೇತವೂ ಆಯಿತು. ಸ್ಮಾರಕ ನಿರ್ಮಾಣದಿಂದ ಅವನ ವ್ಯಕ್ತಿತ್ವ ವೃದ್ಧಿಗೆ ಸ್ವಲ್ಪವೂ ಸಹಕಾರಿ ಆಗಲಿಲ್ಲ. ಯಾರ ಜ್ಞಾಪಕಾರ್ಥ ಸ್ಮಾರಕ ಕಟ್ಟುತ್ತೇವೋ, ಅದನ್ನು ಕಟ್ಟಿಸಿದವರ ವ್ಯಕ್ತಿತ್ವವೂ ಅದರಿಂದ ಬೆತ್ತಲಾಗುತ್ತದೆ. ಇಂಥ ಸಾಮಾನ್ಯ ಸಂಗತಿಯನ್ನೂ ಅರಿಯದೇ ಸ್ಮಾರಕ ಕಟ್ಟಲು ಹೋಗಬಾರದು.

ಅಷ್ಟಕ್ಕೂ ಸ್ಮಾರಕ ಕಟ್ಟುವುದು ಸಾಧನೆಯಲ್ಲ, ಯಾರ‍್ಯಾರದ್ದೋ ಸ್ಮಾರಕ ಕಟ್ಟಿಸಿದವರೂ ದೊಡ್ಡವರೆನಿಸಿಕೊಳ್ಳುವುದಿಲ್ಲ. ಸ್ಮಾರಕ ಕಟ್ಟಿಸಿದ ಮಾತ್ರಕ್ಕೆ ಸತ್ತ ವ್ಯಕ್ತಿಗೆ ಜೀವ ಬರುವುದಿಲ್ಲ. ಆದರೆ ಸ್ಮಾರಕವೆನ್ನುವುದು ಮಾರಕವೂ ಆಗಬಾರದು, ಅಣಕವೂ ಆಗಬಾರದು. ಏನಂತೀರಾ?

ಜಾಗತಿಕ ವೇದಿಕೆಗಳಲ್ಲಿ ಹೆಚ್ಚುತ್ತಿದೆ, ಭಾರತದ ಅನುಸಂಧಾನ

ಪ್ರಚಲಿತ

ಹೇಮಂತ್ ಗೌಡ
editoped@vishwavani.news

ಭಯೋತ್ಪಾದನೆಯಂಥ ವಿಧ್ವಂಸಕ ಕೃತ್ಯಗಳನ್ನು ಕಡಿವಾಣ ಹಾಕಲು ಶಸ್ತ್ರಾಸ್ತ್ರ ಬಲಕ್ಕಿಂತ ಮೊದಲು ಅಗತ್ಯವಿರುವುದು ರಾಜಕೀಯ ಇಚ್ಛಾಶಕ್ತಿ ಎಂದು ಜಗತ್ತಿನ ಮುಂದೆ ಪುನರುಚ್ಚರಿಸುತ್ತಲೇ ಬಂದಿರುವ ಭಾರತ ಇಂದು ಈ ವಿಷಯದಲ್ಲಿ ಜಾಗತಿಕ ನಾಯಕತ್ವ ವಹಿಸಿದೆ ಎಂದರೆ ಯಾವುದೇ ಅತಿಶಯೋಕಿಯಲ್ಲ. ಇದೀಗ ಸುಸ್ಥಿರ ಆರ್ಥಿಕ ಅಭಿವೃದ್ಧಿಯ ವಿಚಾರದಲ್ಲೂ ತನ್ನದೇ ಪಥ ನಿರ್ಮಿಸುತ್ತಿರುವ ಭಾರತ, ತಾನಿರುವ ಪ್ರತಿಯೊಂದು ಬಹುಪಕ್ಷೀಯ ವೇದಿಕೆಯನ್ನೂ ಸಮರ್ಪಕವಾಗಿ ಬಳಸಿಕೊಳ್ಳುತ್ತಿದೆ. ಇತ್ತೀಚೆಗೆ ಅರ್ಜೆಂಟೀನಾದಲ್ಲಿ ನಡೆದ 13ನೇ ಜಿ-20 ಶೃಂಗ ಇದರ ಮುಂದುವರಿದ ಭಾಗ. ವಿಧ್ವಂಸಕ ಶಕ್ತಿಗಳ ಆರ್ಥಿಕ ಬೆನ್ನೆಲುಬನ್ನೇ ಮುರಿಯಲು ಶಪಥಗೈದಂತೆ ಕಾಣುತ್ತಿರುವ ಪ್ರಧಾನಿ ನರೇಂದ್ರ ಮೋದಿ, ಈ ಬಾರಿಯ ಜಿ-20 ಶೃಂಗದಲ್ಲೂ ಭಾರತದ ಈ ಇರಾದೆಯನ್ನು ಮತ್ತೊಮ್ಮೆ ಪ್ರಚುರಪಡಿಸಿದ್ದಾರೆ.

ವಿಜಯ್ ಮಲ್ಯ, ನೀರವ್ ಮೋದಿಯಂಥ ಉದ್ದೇಶಿತ ಸುಸ್ತಿದಾರರಿಂದ ಹಿಡಿದು ಹವಾಲಾ ಜಾಲದ ಮೂಲಕ ಭಯೋತ್ಪಾದನೆ ಜಾಲಗಳನ್ನು ನಿಯಂತ್ರಿಸುತ್ತಿರುವ ಭೂಗತ ಪಾತಕಿ ದಾವೂದ್ ಇಬ್ರಾಹಿಂನ್ನು ಮಟ್ಟ ಹಾಕಲು ಬೇಕಾದ ಕ್ರಮಗಳು ಹಾಗೂ ಅವುಗಳ ತ್ವರಿತ ಅಗತ್ಯವನ್ನು ಒತ್ತಿ ಹೇಳಿದ ಪ್ರಧಾನಿ, ಆರ್ಥಿಕ ಅಪರಾಧಿಗಳನ್ನು ಮಟ್ಟ ಹಾಕಲು ಅಗತ್ಯವಿರುವ ಕಠಿಣ ಕಾನೂನುಗಳನ್ನು ರಚಿಸಿಕೊಳ್ಳಲು ಒಂಬತ್ತು ಅಂಶಗಳ ಸಮಗ್ರ ಒಕ್ಕಣೆಯನ್ನೇ ಜಾಗತಿಕ ಸಮುದಾಯದ ಮುಂದೆ ಇಟ್ಟಿದ್ದಾರೆ.

ದೇಶದ ಬ್ಯಾಂಕಿಂಗ್ ವ್ಯವಸ್ಥೆಗೆ ಅಂಟಿಕೊಂಡಿರುವ ಅನುತ್ಪಾದಕ ಆಸ್ತಿ ಎಂಬ ಕ್ಯಾನ್ಸರ್‌ಅನ್ನು ತೊಡೆದು ಹಾಕಲು ದೊಡ್ಡ ಹೋರಾಟಕ್ಕೇ ಮುಂದಾಗಿರುವ ಮೋದಿ, ವಿತ್ತೀಯ ಸ್ಥಿರತೆ ಹಾಗೂ ಆರ್ಥಿಕ ನೀತಿಗಳ ವಿಚಾರ ವೇದಿಕೆಯಾದ ಜಿ-20 ಶೃಂಗವನ್ನು ಈ ನಿಟ್ಟಿನಲ್ಲಿ ಸಮರ್ಪಕವಾಗಿ ಬಳಸಿಕೊಂಡಿದ್ದಾರೆ. ದೊಡ್ಡ ಮಟ್ಟದ ಆರ್ಥಿಕ ಪ್ರಗತಿ ಸಾಧಿಸಲು ಅಗತ್ಯವಿರುವ ಮೂಲಸೌಕರ್ಯ, ಮಾನವ ಸಂಪನ್ಮೂಲ ವೃದ್ಧಿ, ಜಿಎಸ್‌ಟಿಯಂಥ ಕ್ರಮಗಳ ಮೂಲಕ ಆಂತರಿಕ ಮಾರುಕಟ್ಟೆ ಸುಧಾರಣೆ, ಉದ್ಯಮ ಸ್ನೇಹಿ ವಾತಾವರಣ ನಿರ್ಮಾಣ ಸೇರಿದಂತೆ ಮಹತ್ವದ ಕ್ರಮಗಳನ್ನು ನಾಗಾಲೋಟದಲ್ಲಿ ಅನುಷ್ಠಾನಕ್ಕೆ ತರುತ್ತಿರುವ ಭಾರತ ಇದೀಗ ಮತ್ತೊಂದು ನಿರ್ಣಾಯಕ ಕ್ಷೇತ್ರವಾದ ಬ್ಯಾಂಕಿಂಗ್ ವ್ಯವಸ್ಥೆಯ ಸುಧಾರಣೆಯ ವಿಚಾರದಲ್ಲಿ ನಿರ್ಣಾಯಕ ಹೆಜ್ಜೆಗಳನ್ನು ಇಡಲು ಮುಂದಾಗಿ ಅಂತಾರಾಷ್ಟ್ರೀಯ ಸಮುದಾಯದ ಗಮನ ಸೆಳೆದಿದೆ.

ಆರ್ಥಿಕ ಅಪರಾಧಿಗಳನ್ನು ಮಟ್ಟ ಹಾಕಲು ಅಗತ್ಯವಿರುವ ಸಹಕಾರ ವೃದ್ಧಿಗೆ ಕರೆ ನೀಡಿದ ಭಾರತ, ಜಾಗತಿಕ ಮಟ್ಟದಲ್ಲಿ ಸಹಕಾರ ಹಾಗೂ ಸಮನ್ವಯತೆ ತಂದು ವಿತ್ತೀಯ ಟಾಸ್ಕ್ ಫೋರ್ಸ್(ಊಅಖಊ)ನಂಥ ಸಂಸ್ಥೆಗಳಿಗೆ ಇನ್ನಷ್ಟು ಬಲ ನೀಡುವ ಮೂಲಕ ವಿದೇಶಗಳಲ್ಲಿ ತಲೆ ಮರೆಸಿಕೊಂಡ ಆರ್ಥಿಕ ಅಪರಾಧಿಗಳ ಪತ್ತೆ, ಗಡೀಪಾರು ಹಾಗೂ ಅವರ ವಿರುದ್ಧ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುವ ವಿಚಾರದಲ್ಲಿ ಸಾಮಾನ್ಯ ಮಾಧ್ಯಮವೊಂದರ ಸ್ಥಾಪನೆಗೆ ಬಲವಾಗಿ ಆಗ್ರಹಿಸಿದೆ. ಭಯೋತ್ಪಾದನೆಯ ಆರ್ಥಿಕ ಮೂಲಗಳ ಬೆನ್ನತ್ತಿರುವ ಊಅಖಊ ಇತ್ತೀಚಿನ ದಿನಗಳಲ್ಲಿ ಪಾಕಿಸ್ತಾನದ ವಿರುದ್ಧ ಕಠಿಣ ನಿಲುವು ತಳೆದಿರುವುದನ್ನು ಇಲ್ಲಿ ಸ್ಮರಿಸಬೇಕು.

ಪ್ರತಿಯೊಂದು ಮಹತ್ವದ ವೇದಿಕೆಗಳು ಘಟಿಸಿದಾಗೆಲ್ಲಾ 'ಗ್ಲೋಬಲ್ ಪವರ್' ಆಗುವ ತನ್ನ ಆಶಾದಾಯಕ ಹೆಜ್ಜೆಗಳನ್ನು ವಿಶ್ವಾಸದಿಂದ ಇಡುತ್ತಿರುವ ಭಾರತ, ಜಾಗತಿಕ, ಪ್ರಾದೇಶಿಕ ಹಾಗೂ ದ್ವಿಪಕ್ಷೀಯ ಮಟ್ಟಗಳ ಸ್ತರದಲ್ಲಿ ತನ್ನ ವ್ಯೂಹವನ್ನು ಮತ್ತಷ್ಟು ಪ್ರಬಲವಾಗಿ ಹೆಣೆಯುತ್ತಲೇ ಬಂದಿದೆ. ಹಿಂದೂ ಮಹಾಸಾಗರ ಹಾಗೂ ಪೆಸಿಫಿಕ್ ಪ್ರದೇಶಗಳಲ್ಲಿ ಚೀನಾದ ಆಕ್ರಮಣಶೀಲ ನೀತಿಗಳಿಗೆ ಪ್ರತಿಯಾಗಿ ಪ್ರಭಾವವೊಂದನ್ನು ಸೃಷ್ಟಿಸಲು ಸಮಾನ ಮನಸ್ಕತೆ ತೋರುತ್ತಿರುವ ಮತ್ತೆರಡು ಪ್ರಜಾಪ್ರಭುತ್ವ ಶಕ್ತಿಗಳಾದ ಅಮೆರಿಕ ಹಾಗೂ ಜಪಾನ್‌ನೊಂದಿಗೆ ಜಿ-20ಯ ನೇಪಥ್ಯದಲ್ಲಿ ಇದೇ ಮೊದಲ ಬಾರಿಗೆ ತ್ರಿಕೋನ ಸಭೆಯೊಂದರಲ್ಲಿ ಭಾರತ ಭಾಗಿಯಾಗಿದೆ. ತಮ್ಮ ನಡುವಿನ ವಿದೇಶಾಂಗ ಹಾಗೂ ರಕ್ಷಣಾ ನೀತಿಗಳನ್ನು ಸಮೀಕರಣಗೊಳಿಸಲು ರಕ್ಷಣಾ ಹಾಗೂ ವಿದೇಶಾಂಗ ಸಚಿವರ ಮಟ್ಟದ '2 ಪ್ಲಸ್ 2' ಭೇಟಿಗಳಿಂದ ಹಿಡಿದು, ಜಂಟಿ ಸಮರಾಭ್ಯಾಸಗಳವರೆಗೂ ಈ ಮೂರೂ ದೇಶಗಳ ನಡುವಿನ ಸಾಮಾನ್ಯ ಕಾರ್ಯಕ್ರಮಗಳು ರೂಪುಗೊಳ್ಳುತ್ತಿವೆ. ಈ ಮೂರು ದೇಶಗಳ ಜತೆಗೆ ಆಸ್ಟ್ರೇಲಿಯಾ ಸಹ ಸೇರಿಕೊಂಡಂತೆ 'ಕ್ವಾಡ್' ಎನ್ನುವ ಚತುಷ್ಕೋನ ಮಿಲಿಟರಿ ಬಣದ ಸ್ಥಾಪನೆ ಮೂಲಕ ನ್ಯಾಟೋ ತತ್ಸಮಾನ ಸಮೂಹವೊಂದನ್ನು ಸೃಷ್ಟಿಸುವ ಮೂಲಕ ಪ್ರದೇಶದ ಭೌಗೋಳಿಕ ರಾಜಕೀಯಕ್ಕೆ ವಿನೂತನ ಆಯಾಮವನ್ನೇ ಸೃಷ್ಟಿಸಲು ಕಳೆದ ತಿಂಗಳ ಆಸಿಯಾನ್ ಹಾಗೂ ಪೂರ್ವ ಏಷ್ಯಾ ದೇಶಗಳ ಸಭೆ ಸಂದರ್ಭ ಮಹತ್ವದ ಹೆಜ್ಜೆಗಳನ್ನು ಇಡಲಾಗಿದೆ.

ನೌಕಾಯಾನ ಸ್ವಾತಂತ್ರ್ಯ ಮಾತ್ರವಲ್ಲದೇ; ಸಂಪರ್ಕ, ಸುಸ್ಥಿರ ಆರ್ಥಿಕ ಅಭಿವೃದ್ಧಿ, ಸಾಗರಗಳ ರಕ್ಷಣೆ, ವಿಪತ್ತು ನಿರ್ವಹಣೆಗಳಂಥ ವಿಚಾರಗಳಲ್ಲಿ ಈ ತ್ರಿಕೋನ ಬಣವು ಇಂಡೋ-ಪೆಸಿಫಿಕ್ ಪ್ರದೇಶದ ದೇಶಗಳೊಂದಿಗೆ ಭಾಗಿಯಾಗಲು ಮತ್ತಷ್ಟು ಸಮರ್ಪಕ ಕ್ರಮಗಳನ್ನು ತರಲು ಯತ್ನಗಳು ನಡೆಯುತ್ತಿದ್ದು, ಚೀನಾದೊಂದಿಗೆ ಭಿನ್ನಮತ ಇರುವ ಸಿಂಗಪುರ, ಫಿಲಿಪ್ಪೀನ್ಸ್, ಇಂಡೋನೇಷ್ಯಾ, ವಿಯೆಟ್ನಾಂಗಳಂಥ ದೇಶಗಳಿಗೆ ಸಮಾನಮನಸ್ಕ ವೇದಿಕೆಯಾಗಿ ನಿಲ್ಲಲು ಈ ಬಣ ಚಿಂತನೆ ನಡೆಸಿದೆ.

ಇದೇ ಸಂದರ್ಭ ಮತ್ತೊಂದು ತ್ರಿಪಕ್ಷೀಯ ಮಾತುಕತೆಗೆ ಮುಂದಾದ ಪ್ರಧಾನಿ ಮೋದಿ; ಚೀನಾ ಅಧ್ಯಕ್ಷ ಕ್ಸೀ ಝಿನ್ ಪಿಂಗ್ ಹಾಗೂ ರಷ್ಯಾ ಅಧ್ಯಕ್ಷ ವ್ಲಾದಿಮೀರ್ ಪುಟಿನ್ ಜತೆಗೆ ನಡೆಸಿ ಭಯೋತ್ಪಾದನೆ ವಿರುದ್ಧದ ತಮ್ಮ ಸಮರದಲ್ಲಿ ತಮ್ಮ ರಾಜಕೀಯ ಅಸ್ತ್ರವನ್ನು ಮತ್ತೊಮ್ಮೆ ಝುಳಪಿಸಿದ್ದಾರೆ. ಯಾವ ವೇದಿಕೆ ಮೇಲೆ ಅಮೆರಿಕ-ಚೀನಾಗಳ ನಡುವಿನ ವ್ಯಾಪಾರ ಸಮರದ ಛಾಯೆ ಮಾರ್ದನಿಸುತ್ತಿತ್ತೋ,ಅದೇ ವೇದಿಕೆಯಲ್ಲೇ ಭಾರತವು ಎರಡೂ ದೇಶಗಳೊಂದಿಗೆ ರಚನಾತ್ಮಕ ಕ್ರಮಗಳಿಗೆ ಮುಂದಾಗಿ ರಾಜತಾಂತ್ರಿಕ ಪ್ರೌಢಿಮೆ ಎಂದರೇನೆಂದು ತೋರಿದೆ.

ವೇದಿಕೆಯ ಮತ್ತೊಂದು ನೇಪಥ್ಯದಲ್ಲಿ ತನ್ನ 'ಬ್ರಿಕ್ಸ್' ಮಿತ್ರರನ್ನೂ ವಿಶ್ವಾಸಕ್ಕೆ ತೆಗೆದುಕೊಂಡ ಭಾರತ, ಸುಸ್ಥಿರ ಅಭಿವೃದ್ಧಿ, ಭದ್ರತಾ ಸಮಿತಿಯ ಸುಧಾರಣೆ ಹಾಗೂ ಭಯೋತ್ಪಾದಕರ ಆರ್ಥಿಕ ಮೂಲಗಳನ್ನು ಮಟ್ಟಹಾಕುವ ಸಂಬಂಧ ಮಾತುಕತೆ ನಡೆಸಿದೆ. ಜಿ-7 ಹಾಗೂ ಜಿ-8ನಂಥ ಶೃಂಗಗಳಲ್ಲಿ ಕೇವಲ ಪಾಶ್ಚಾತ್ಯ ಶಕ್ತಿಗಳದ್ದೇ ಕಾರುಬಾರು ಎನ್ನುವ ಕಾಲವೊಂದಿತ್ತು. ಆದರೆ, ಪಾಶ್ಚಾತ್ಯ ಜಗತ್ತಿನಲ್ಲಿ ಕಳೆದ ದಶಕದಲ್ಲಿ ಉಂಟಾದ ಆರ್ಥಿಕ ಮುಗ್ಗಟ್ಟಿನಿಂದ ಜಗತ್ತನ್ನು ಚೇತರಿಕೆಯ ಹಾದಿಯಲ್ಲಿ ತೆಗೆದುಕೊಂಡು ಹೋಗಲು ಭಾರತ ಹಾಗೂ ಚೀನಾದಂಥ ಪ್ರವರ್ಧಮಾನಕ್ಕೆ ಬರುತ್ತಿರುವ ಶಕ್ತಿಗಳ ಪಾತ್ರ ಬಹಳ ದೊಡ್ಡದು.

ಈ ನಿಟ್ಟಿನಲ್ಲಿ ಜಿ-20ಯಂಥ ಜಾಗತಿಕ ಆರ್ಥಿಕ ವೇದಿಕೆಗಳ ಮೂಲಕ ಮುಂದಿನ ದಿನಗಳ ಭೂ ಆರ್ಥಿಕತೆಯ ವ್ಯವಹಾರಗಳಲ್ಲಿ ನಿರ್ಣಾಯಕ ಪಾತ್ರಗಳನ್ನು ದೆಹಲಿ ಹಾಗೂ ಬೀಜಿಂಗ್‌ನಂಥ ದೇಶಗಳು ನಿರ್ವಹಿಸಲು ಅದಾಗಲೇ ಆರಂಭಿಸಿವೆ ಎಂದರೆ ಅತಿಶಯೋಕ್ತಿಯಲ್ಲ.

ಜಿ-20ಯ ವಿತ್ತೀಯ ನೀತಿ ನಿರ್ಧರಿಸುವ ವಿಶ್ವ ಬ್ಯಾಂಕ್ ಹಾಗೂ ಐಎಂಎಫ್‌ಗಳು ಪಾಶ್ಚಾತ್ಯ ಶಕ್ತಿಗಳ ಕೈಗೊಂಬೆಗಳಾಗಿದ್ದು, ಈ ಪಾರುಪತ್ಯಕ್ಕೆ ಪ್ರತಿಯಾಗಿ, ಮಹತ್ವಾಕಾಂಕ್ಷೆಯ ಶಕ್ತಿಗಳ ಬಣಗಳ ಮಟ್ಟದಲ್ಲಿ ಸಹಕಾರ ಬ್ಯಾಂಕ್‌ಗಳನ್ನು ತೆರೆಯುವ ಮೂಲಕ ವಿತ್ತೀಯ ಸಮರದಲ್ಲಿ ಪರ್ಯಾಯ ಬಣವಾಗುತ್ತಿರುವ ಬ್ರಿಕ್ಸ್ ತನ್ನದೇ ಛಾಪನ್ನು ಸೃಷ್ಟಿಸಿಕೊಳ್ಳುತ್ತಿದೆ. ಅರ್ಜೆಂಟೀನಾದಂಥ ದೇಶಗಳೂ ಸಹ ಬ್ರಿಕ್ಸ್ ಭಾಗವಾಗಲು ಇಚ್ಛಿಸುತ್ತಿವೆ. ಅಲ್ಲದೇ ಅಮೆರಿಕ-ಯುರೋಪ್‌ಗಳ ಪ್ರಾಬಲ್ಯಕ್ಕೆ ಪ್ರತಿಯಾಗಿ ಏಷ್ಯಾ, ಆಫ್ರಿಕಾ ಹಾಗೂ ಲ್ಯಾಟಿನ್ ಅಮೆರಿಕಗಳ ದನಿಯನ್ನು ತರುವ ಮೂಲಕ ಜಾಗತಿಕ ಸಮತೋಲನ ಸೃಷ್ಟಿಸುವಲ್ಲಿ ಮುಂದಡಿ ಇಟ್ಟಿದೆ. 3.1 ಶತಕೋಟಿ ಜನಸಂಖ್ಯೆ(ಜಗತ್ತಿನ 41%ನಷ್ಟು), ಒಟ್ಟಾರೆ 40.55 ಲಕ್ಷಕೋಟಿ ಡಾಲರ್‌ಗಳಷ್ಟು ಜಿಡಿಪಿ(ಜಗತ್ತಿನ 32%ನಷ್ಟು) ಹೊಂದಿರುವ ಬ್ರಿಕ್ಸ್ ಸಮೂಹವೇ ಮುಂದಿನ ದಿನಗಳಲ್ಲಿ ಜಿ-20ಯಂಥ ವೇದಿಕೆಗಳಲ್ಲಿ ತಮ್ಮದೇ ಪ್ರಭಾವ ಹೊಂದಲಿವೆ.

2021ರಲ್ಲಿ ತಾನು ಆಯೋಜಿಸಬೇಕಿದ್ದ ಜಿ-20 ಶೃಂಗವನ್ನು 2022ಕ್ಕೆ ಮುಂದೂಡುವ ಮೂಲಕ, 75ನೇ ಸ್ವಾತಂತ್ರ್ಯೋತ್ಸವದ ವರ್ಷದಲ್ಲಿ ಭಾರತವು ಸಾಮಾಜಿಕ-ಆರ್ಥಿಕ ಕ್ಷೇತ್ರಗಳಲ್ಲಿ ಸಾಧಿಸಿದ ಅಭೂತಪೂರ್ವ ಯಶಸ್ಸನ್ನು ಜಗತ್ತಿನ ಮುಂದೆ ಇಡಲು ಪ್ರಧಾನಿ ನರೇಂದ್ರ ಮೋದಿ ಬಯಸಿದ್ದಾರೆ. 2003ರಲ್ಲಿ ವಾಜಪೇಯಿ ಸರಕಾರ ಇದ್ದಾಗ 2010ರ ಕಾಮನ್‌ವೆಲ್ತ್ ಕ್ರೀಡಾಕೂಟದ ಆತಿಥ್ಯವನ್ನು ಭಾರತಕ್ಕೆ ತರಲು ಸಾಕಷ್ಟು ರಾಜತಾಂತ್ರಿಕ ನೈಪುಣ್ಯ ಬಳಸಿದ್ದರು. ಆದರೆ ಮುಂದೆ ಬಂದ ಯುಪಿಎ ಸರಕಾರದ ಆಡಳಿತಾವಧಿಯಲ್ಲಿ ಜರುಗಿದ ಕ್ರೀಡಾಕೂಟದಲ್ಲಿ ಏನೆಲ್ಲಾ ಮಟ್ಟದ ಹಗರಣಗಳಾದವು ಎಂಬುದು ಜಗತ್ತಿಗೇ ತಿಳಿದಿದೆ. ಆದರೆ ಕಾಮನ್‌ವೆಲ್ತ್ ಕ್ರೀಡಾಕೂಟದಂತೆ, ಈ ಶೃಂಗವೂ ಸಹ ದೂರದರ್ಶಿತ್ವ ಇಲ್ಲದ ನಾಯಕತ್ವಗಳ ಕೈಕೆಳಗಿನ ಆತಿಥ್ಯದಲ್ಲಿ ಸಿಲುಕಿ, ಇನ್ನಷ್ಟು ಬ್ರಹ್ಮಾಂಡ ಭ್ರಷ್ಟಾಚಾರಗಳಿಗೆ ವೇದಿಕೆಯಾಗದಿರಲಿ.

ಕಳೆದ ಮೂರು ದಶಕಗಳಲ್ಲಿ ತಾನು ಸಾಧಿಸಿದ ಆಮೂಲಾಗ್ರ ಪ್ರಗತಿ ಹಾಗೂ ಭವಿಷ್ಯದ ನೀಲನಕ್ಷೆಯ ಸ್ಪಷ್ಟ ಅಂದಾಜನ್ನು ಜಾಗತಿಕ ಸಮುದಾಯದ ಮುಂದೆ ಇಡುವ ಮೂಲಕ, 2032ರ ಒಲಿಂಪಿಕ್ಸ್ ಕೂಟ ಆಯೋಜನೆ ಮಾಡಲು ಆಸಕ್ತಿ ತೋರುತ್ತಿರುವ ಭಾರತಕ್ಕೆ 2022ರ ಜಿ-20 ಶೃಂಗದ ಆಯೋಜನೆ ಒಂದು ದೊಡ್ಡ ಸಾಧ್ಯತೆಯಾಗಲಿದೆ. ಏಕೆಂದರೆ, ಅದಾದ ಮೂರು ವರ್ಷಗಳ ಬಳಿಕ, ಅಂದರೆ 2032ರ ಒಲಿಂಪಿಕ್ ಆತಿಥ್ಯ ಯಾರ ಪಾಲಾಗಲಿದೆ ಎಂದು ನಿರ್ಧಾರವಾಗಲಿದೆ. ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯ ಸುಧಾರಣೆಗಳಿಗೆ ಆಗ್ರಹಿಸಲು ಸಮಾನ ಮನಸ್ಕ ದೇಶಗಳ ವೇದಿಕೆ ನಿರ್ಮಾಣ ಮಾಡಿಕೊಂಡು ದಾಪುಗಾಲುಗಳನ್ನೇ ಇಡುತ್ತಿರುವ ಭಾರತದ ಪ್ರಸಕ್ತ ರಾಜತಾಂತ್ರಿಕ ನಾಗಾಲೋಟವನ್ನು ಗಮನಿಸಿದರೆ, ಒಲಿಂಪಿಕ್ಸ್ ಆತಿಥ್ಯದ ಸ್ಪರ್ಧೆಯಲ್ಲಿ ಜಯಿಸಿದರೆ ಏನೂ ಅಚ್ಚರಿಯಿಲ್ಲ.